Volume: 1 Issue: 1 Pages: 14-16




# ಮಳೆಯನ್ನು ಕುರಿತು ಜನಪದರ ನಂಬಿಕೆಗಳು

*[1]Dr. Nagendra Masuti

*[1]Kannada Literature & Research Guide, Smt.Veeramma Gangasiri Women's Degree College, Gulbarga, Karnataka, India

**Article Info.**
**E-ISSN:** 2583-6528
**Impact Factor (SJIF):** 3.477
**Available online:**
www.alladvancejournal.com

**Received:** 07/Sep/2022
**Accepted:** 11/Oct/2022

***Corresponding Author**
**Dr. Nagendra Masuti**
Kannada Literature & Research Guide, Smt.Veeramma Gangasiri Women's Degree College, Gulbarga, Karnataka, India

**Abstract**
ಮಳೆಯು ಸಕಾಲಕ್ಕೆ ಬಂದ್ರೆ ರೈತಬಾಂಧವರು ಭೂಮಿಯನ್ನು ಉತ್ತಿ ಬಿತ್ತಿ ಬೆಳೆಗಳನ್ನು ಬೆಳೆಯುತ್ತಾರೆ. ಮಳೆ ಚೆನ್ನಾಗಿ ಆದರೆ, ನಾಡು, ಕಾಡು–ಮೇಡುಗಳು ಸಮೃದ್ಧವಾಗಿ ಬೆಳೆಯುತ್ತವೆ. ಭೂಮಿತಾಯಿ ಅಚ್ಚಹಸುರಾದ ಹುಲ್ಲಿನ ಸೀರೆಯನ್ನುಟ್ಟುಕೊಂಡು, ಗಿಡ–ಮರ ಬಳ್ಳಿಗಳೆಂಬ ಆಭರಣಗಳನ್ನು ತೊಟ್ಟು ನೋಡುವವರ ಕಣ್ಮನಗಳಿಗೆ ಹರ್ಷವನ್ನು ತರುತ್ತಾಳೆ. ಮನುಷ್ಯ, ಪ್ರಾಣಿ ಮತ್ತುಲ ಪಕ್ಷಿಗಳು ಸುಖ ಸಂತೋಷದಿಂದ ಜೀವನ ಸಾಗಿಸುತ್ತವೆ. ಒಂದು ವೇಳೆ ಮಳೆ ಬಾರದಿದ್ದರೆ ಗಿಎ ಮರಗಳು ತಮ್ಮ ಎಲೆಗಳನ್ನು ಕಳಚಿಕೊಂಡು, ಹುಲ್ಲೆಲ್ಲ ಒಣಗಿದಾಗ ಮುತ್ತೈದತನ ಕಳೆದುಕೊಂಡ ವಿಧವೆಯಂತೆ ಭೂಮಿತಾಯಿಯು ಕಾಣಿಸುತ್ತಾಳೆ. ಸುಂದರವಾದ ನಿಸರ್ಗವು ವಿಕೃತಗಳ್ಳುತ್ತದೆ.

**Keywords:** ಮನುಷ್ಯರಂತೆ ಪ್ರಾಣಿ–ಪಕ್ಷಿಗಳು ಕೂಡ, ಸುಣ್ಣ ಕೊಡ್ತೀನಿ ಸುರಿಯಲೇ ಮಳೆಯೇ, ಸರಿಯಲೇ ಮಳೆಯೇ ಗುರ್ಜಿ, ಗುರ್ಜಿ ಎಲ್ಲ್ಯಾಡಿ ಬಂದೀ.

## Introduction

ಒಂದೊಂದು ಸಲ ತಿಂಗಳಗಟ್ಟಲೇ ಅಥವಾ ಇಡೀ ವರ್ಷಾನುಗಟ್ಟಲೇ ಮಳೆ ಬಾರದೇ ಹೋಗುತ್ತದೆ. ಆದ್ದರಿಂದ ಮನುಷ್ಯ, ಪ್ರಾಣಿ ಪಕ್ಷಿಗಳಿಗೆ ಆಹಾರ, ನೀರು ಸಿಗದೆ ಬಹಳಷ್ಟು ತೊಂದರೆಯುಂಟಾಗುತ್ತದೆ. ಆಗ ಜನಪದರು ಇದಕ್ಕೆ ಬರ ಬಿದ್ದಿದೆ ಎಂದು ಕರೆಯುತ್ತಾರೆ. ಒಂದೊಂದು ಸಲ ವಿಪರೀತ ಮಳೆಯಿಂದ ನಿಸರ್ಗ ಹಾನಿಗೀಡಾಗುತ್ತದೆ. ಹೀಗೆ ಅತಿವೃಷ್ಟಯಿಂದಾದ ಬರವನ್ನು ಹಸಿ ಬರವೆಂದು, ಅನಾವೃಷ್ಟಿಯಿಂದಾದ ಬರವನ್ನು ಒಣಬರವೆಂದು ಕರೆಯುತ್ತಾರೆ. ಇಂಥ ಸಮಯದಲ್ಲಿ ಬಡ ಜನರು ಆಹಾರ, ನೀರಿಗಾಗಿ ಪ್ರದೇಶದಿಂದ ಪ್ರದೇಶಕ್ಕೆ ವಲಸೆ ಹೋಗುತ್ತಾರೆ. ಮನುಷ್ಯರಂತೆ ಪ್ರಾಣಿ–ಪಕ್ಷಿಗಳು ಕೂಡ ಜೀವಿಸುವುದಕ್ಕಾಗಿ ಆಹಾರ ನೀರಗಳನ್ನು ಹುಡುಕುತ್ತ ಸ್ಥಳದಿಂದ ಸ್ಥಳಕ್ಕೆ ವಲಸೆ ಹೋಗುತ್ತವೆ.

ಮಳೆ ಬರದಿದ್ದರೆ ಜನಜೀವನ ಈ ಮೇಲಿನಂತೆ ತೊಂದರೆಗೆ ಒಳಗಾಗುತ್ತದೆ. ಮಳೆ ಯಾಕೆ ಬರಲಿಲ್ಲವೆಂದಾಗ, ಜನಪದರು ಅದಕೆ ತಾವು ನಂಬಿಕೊಂಡ ಕಾರಣಗಳನ್ನು ಹೇಳುತ್ತಾರೆ. ಉದಾಹರಣೆಗೆ: ಶಕ್ತಿದೇವತೆಗಳಾದ ಮರೆಮ್ಮ, ಶೆಟಗಮ್ಮ, ಪೋಚಮ್ಮ, ದುರ್ಗಮ್ಮ, ಕೆಂಚಮ್ಮ ಈ ಮುಂತಾದವು ಮುನಿದಿದ್ದಾರೆ. ಅವುಗಳಿಗೆ ಸಂತೃಪ್ತಿ ಪಡಿಸಬೇಕೆನ್ನುತ್ತಾರೆ. ಹೀಗೆ ಕೆಲವೊಂದು ಸಮಯದಲ್ಲಿ ಮಳೆ ಬಾರದೆ ಹೋದಾಗ ಜನಪದರು ಕೆಲವೊಂದು ಸಂಪ್ರದಾಯ

ನಂಬಿಕೆಗಳ, ಆಚರಣೆಗಳನ್ನು ಆಚರಿಸಿ ಮಳೆಯನ್ನು ಬರುವಂತೆ ಮಾಡುತ್ತಾರೆ. ಇಂಥ ಆಚರಣೆಗಳಿಂದಲೇ ಎ ಬರುತ್ತದೆಂದು ಅವರು ನಂಬಿಕೊಂಡಿದ್ದಾರೆ. ಜನಪದರು ಮಳೆಯನ್ನು ಕುರಿತು ನಂಬಿಕೊಂಡು ಬಂದಿರುವ ಆಚರಣೆಗಳನ್ನು ನೋಡೋಣ.

ಗ್ರಾಮದ ಶಕ್ತಿ ದೇವತೆಗಳು ಕೋಪಿಸಿಕೊಂಡಾಗ ಮಳೆ ಬರುವುದಿಲ್ಲ ಎಂಬುವುದು ಅವರ ನಂಬಿಕೆ. ಇದಕ್ಕೆ ಪರಿಹಾರವೆಂದರೆ ಎಲ್ಲ ಶಕ್ತಿದೇವತೆಗಳಿಗೆ ಹೊಸ ಸೀರೆ ತಂದು ಉಡಿಸುತ್ತಾರೆ. ಇದಕ್ಕೆ ದೇವರಿಗೆ ಉಡಿ ತುಂಬುವುದು ಎನ್ನುತ್ತಾರೆ. ಅದರೊಂದಿಗೆ ಎಲ್ಲಾ ದೇವತೆಗಳ ಗುಡಿಯಲ್ಲಿ ಐದು ವಾರ ಅಥವಾ ಒಂಬತ್ತು ವಾರ ಹೀಗೆ ಕೆಲವು ವಾರಗಳಷ್ಟು ದಿನ ದೀಪವನ್ನು ಹಗಲು ದೀಪವನ್ನು ಹಗಲು-ರಾತ್ರಿ ಆರದಂತೆ ಉರಿಸುವುದು. ಈ ಆಚರೆಣೆಯನ್ನು 'ದೀಪಕ್ಕೆ ಹಾಕುವುದು' ಎನ್ನುತ್ತಾರೆ. ಹೀಗೆ ಮಾಡುವುದರಿಂದ ದೇವತೆಗಳು ಸಂತೃಪ್ತರಾಗಿ ಮಳೆ ತರುತ್ತವೆಂದು ಹಳ್ಳಿ ಜನರು ನಂಬಿಕೊಂಡಿದ್ದಾರೆ.

ಇನ್ನೊಂದು ನಂಬಿಕೆಯೆನೆಂದರೆ ಪ್ರತಿವಾರದ ಮಂಗಳವಾರದ ಮತ್ತು ಶುಕ್ರವಾರ ಮತ್ತು ಶುಕ್ರವಾರ ದೇವತೆಗಳಿಗೆ ನೀರು ನೀಡುವುದು. ಅಂದರೆ ಮುಂಜಾನೆ ಜನರೆಲು ನೀರು ತರುವುದಕ್ಕೆ ಮೊದಲು ಬಾವಿಯಿಂದ ಐದು ಇಲ್ಲವೆ ಒಂಬತ್ತು ಕೊಡಗಳಷ್ಟು ನೀರನ್ನು ದೇವತೆಗಳ ಗುಡಿಯ ಪೌವಂಟಿಗೆಗಳ ಮೇಲೆ ಸುರಿಯುವುದು. ಹೀಗೆ ಮಾಡುವುದರಿಂದ ಮಳೆ ಬರುತ್ತದೆಂದು ಜನಪದರು ನಂಬಿದ್ದಾರೆ.

ಮಕ್ಕಳಿಂದ ಕೆಲವೊಂದು ಆಟಗಳನ್ನು ಆಡಿಸಿದರೆ ಮಳೆ ಬರುತ್ತದೆ ಎಂದು ಜನಪದರ ನಂಬಿಕೆ. ಗುರ್ಜಿಯ ಆಟ ಆಡುವುದರಿಂದ ಮಳೆ ಬರುತ್ತದೆಂಬ ನಂಬಿಕೆಯಿದೆ. ಗುರ್ಜಿ ಆಟ ಆಡುವುದೆಂದರೆ ಇಬ್ಬರು ಹುಡುಗರು ಒಂದು ಒನಕೆಯನ್ನು ಹಿಡಿದುಕೊಳ್ಳುವರು. ಅದಕ್ಕೆ ಒಂದು ಕಪ್ಪೆಯನ್ನು ಮತ್ತು ಬೇವಿನ ತಪ್ಪಲನ್ನು ಕಟ್ಟಲಾಗುತ್ತದೆ. ಹುಡುಗರು ಮೈ ತೊಯಿಸಿಕೊಂಡು, ಒನಕೆಯನ್ನು ಹೇಗಲ ಮೇಲೆ ಇಟ್ಟುಕೊಂಡು ಮುಂದೆ ಮುಂದೆ ಹೋಗುವರು. ಅವರ ಹಿಂದೆ ಹುಡುಗರ ಗುಂಪು ಪದಗಳನ್ನು ಹಾಡುವರು.

ಗುರ್ಜಿ, ಗುರ್ಜಿ ಎಲ್ಲ್ಯಾಡಿ ಬಂದೀ
ಹಳ್ಳಾಕೊಳ್ಳಾ ತಿರಗ್ಯಾಡಿ ಬಂದ್ಯಾ

ಹೀಗೆ ಹಾಡುತ್ತ ಮನೆಯಿಂದ ಮನೆಗೆ ಹೋಗುವರು, ಆ ಮನೆಯವರು ಜೋಳವನ್ನೋ, ಗೋಧಿಯನ್ನೋ ಇಲ್ಲವೆ ಸಜ್ಜೆಯನ್ನು ದಾನ ಮಾಡುವರು. ಕೊನೆಗೆ ಸಂಗ್ರಹವಾದ ಧಾನ್ಯವನ್ನು ಒಡೆದು ನುಚ್ಚು ಇಲ್ಲವೆ ಬಾನಾ ಮಾಡಿ ಬಾವಿಯ ಮೇಲೆ ಪೂಜೆ ಮಾಡುವರು. ಇದನ್ನು 'ಗಂಗಾ ಪೂಜೆ ಮಾಡುವುದು' ಎನ್ನಲಾಗುತ್ತದೆ. ಪೂಜೆಯಾದ ಮೇಲೆ ಎಲ್ಲಾ ಮಕ್ಕಳು ಸೇರಿಕೊಂಡು ಊಟಮಾಡುತ್ತಾರೆ. ಹೀಗೆ ಮಾಡುವುದರಿಂದ ಗಂಗಾಮಾತೆ ಶಾಂತಳಾಗಿ ಮಳೆ ತರುತ್ತಾಳೆಂದು ಜನಪದರು ನಂಬಿದ್ದಾರೆ.

ಮಳೆಗೆ ಏನೇನೋ ಆಸೆ ತೋರಿಸಿ ಬರುವಂತೆ ಬಾ ಎಂದು ಕರೆಯುವುದು ಈ ಕೆಳಗಿನಂತಿದೆ.

ಸುಣ್ಣ ಕೊಡ್ತೀನಿ ಸುರಿಯಲೇ ಮಳೆಯೇ,
ಸರಿಯಲೇ ಮಳೆಯೇ
ಗುಮ್ಮಿ ಕೊಡ್ತೀನಿ ಗುಮ್ಮಲೇ ಮಳೆಯೇ,
ಗುಮ್ಮಲೇ, ಮಳೆಯೇ
ಕಂಚು ಕೊಡ್ತೀನಿ ಮಿಂಚಲೇ ಮಳೆಯೇ
ಮಿಂಚಲೇ ಮಳೆಯೇ
ಅಡಕಿ ಕೊಡ್ತೀನಿ ಅನಿಯಲೇ ಮಳೆಯೇ
ಅಣಿಯಲೇ ಮಳೆಯೇ

ಈ ಮೇಲಿನ ಕೆಲವೊಂದು ಪದಗಳನ್ನು ಕುರಿತು ವಿವೇಚಿಸಿದಾಗ, ಸುಣ್ಣ, ಗುಮ್ಮಿ,ಕಂಚು, ಅಡಕೆ ಇವು ಒಂದೊಂದು ವೈಶಿಷ್ಟ್ಯವನ್ನು ಹೊಂದಿವೆ. ಸುಣ್ಣವು ಬೆಳ್ಳನೆಯ ಬಣ್ಣ. ಇದು ಶುಭ್ರತೆಯ ಸಂಕೇತ. ಗುಮ್ಮಿ ಇದು ದವಸ-ಧಾನ್ಯಗಳನ್ನು ಸಂರಕ್ಷಿಸುವುದು. ಅಂದರೆ ಮಳೆ ಬಂದು ಆಹಾರ ಧಾನ್ಯಗಳು ಬೆಳೆದಾಗ ಅದರಲ್ಲಿ ಇಡುವುದಕ್ಕಾದರೆ, ಕಂಚು ಇದು ಶ್ರೀಮಂತಿಕೆಯ ಸಂಕೇತವಾಗಿದೆ. ಈ ಹಿನ್ನೆಲೆಯಲ್ಲಿ ಜನಪಸದರು ಈ ಹಾಡುಗಳನ್ನು ನಂಬಿದ್ದಾರೆ.

ಆನಪದರು ಕೆಲವೊಂದು ಆಟಗಳನ್ನು ಅಪಶಕುನವೆಂದುಕೊಳ್ಳುತ್ತಾರೆ. ಮಳೆ ಬಾರದೆ ಹೋದ ಸಮಯದಲ್ಲಿ ಕೆಲಸವಿಲ್ಲದ ಮಕ್ಕಳು, ತರುಣರು, ಚಿಣಿದಾಂಡಿನಾಟ, ಗೋಲಿಯಾಟ, ಚಕಾರ ಮತ್ತು ಹುಲಿಕಟೆರೀ ಮುಂತಾದ ಆಟಗಳನ್ನು ಆಡುತ್ತಿರುವಾಗ, ಹಿರಿಯ ವ್ಯಕ್ತಿಗಳು ಆ ಹುಡುಗರಿಗೆ ಬಯ್ಯುತ್ತಾರೆ. ಈ ಆಟಗಳನ್ನು ಆಡುವುದರಿಂದ ಮಳೆ ಬರುವುದಿಲ್ಲವೆಂದು ಇಲ್ಲವೆ ಮಳೆ ಹೋಗುತ್ತದೆಂದು ಹೇಳುತ್ತಾರೆ. ಅಂದರೆ 'ಈರಪ್ಪ ಸಿಟ್ಟು ಬೀರಪ್ಪನ ಮೇಲೆ' ಎಂಬ ಗಾದೆ ಮಾತಿನಂತೆ ಮಳೆ ಬರದಿದ್ದಕ್ಕಾಗಿರುವ ಸಿಟ್ಟನ್ನು ಉಂಡಾಡುವ ಮಕ್ಕಳ ಮೇಲೆ ಕೋಪಿಸಿಕೊಂಡು ತೀರಿಸಿಕೊಳ್ಳುತ್ತಾರೆ.

ಕಲಬುರಗಿಯ ಸುತ್ತ-ಮುತ್ತಲಿನ ಹಳ್ಳಗಳಲ್ಲಿ ಆಚರಣೆಯಲ್ಲಿರುವ ಮತ್ತೊಂದು ನಂಬಿಕೆಯೆಂದರೆ 'ಬುಟ್ಟಿಪೂಜೆ ಮಾಡುವುದು'. ಬುಟ್ಟಿ ಪೂಜೆಯೆಂದರೆ ವಿವಿಧ ದವಸ-ಧಾನ್ಯಗಳನ್ನು ಬೀಸಿ ಅದರಿಂದ (ದಪ್ಪಟ್ಟ) ರೊಟ್ಟಿ ಮಾಡುವುದು ಮತ್ತು ಕಡಬು, ಹೋಲಿಗ ಅನ್ನ-ಸಾರು ಹೀಗೆ ವಿವಿಧ ತರಹದ ಬೇಳೆ, ಪಲ್ಲೆಗಳಿಂದ ಆಹಾರವನ್ನು ತಯಾರಿಸಿ ಒಂದು ಬುಟ್ಟಿಯಲ್ಲಿ ಆಹಾರವನ್ನು ಇಟ್ಟು ಅದಕ್ಕೆ ಸುಣ್ಣ ಜಾಜಗಳಿಂದ ಅಲಂಕರಿಸಿ ಶಕ್ತಿ ದೇವತೆಗಳ ಗುಡಿಗೆ ಹೋಗಿ ಪೂಜೆ ಮಾಡಿ ಆ ಊರಿನವರೆಲ್ಲ ಸೇರಿ ಊಟ ಮಾಡುತ್ತಾರೆ.

ಹೀಗೆ ಮಾಡುವುದರಿಂದ ಶಕ್ತಿ ದೇವತೆಗಳು ತಮ್ಮ ಮೇಲೆ ದಯ ತೋರಿ ಮಳೆಯನ್ನು ತರುತ್ತವೆಂದು ಜನಪದರು ನಂಬಿದ್ದಾರೆ.

ದೀರ್ಘಕಾಲದವರೆಗೆ ಮಳೆ ಬರದಿರುವಾಗ ದೇವರುಗಳನ್ನು, ಪೂಜಾರಿಗಳನ್ನು ಜನಪದರು ಆಶ್ರಯಿಸುತ್ತಾರೆ. ಅಂಥವುಗಳಲ್ಲಿ ಪುಜಾರಿಗಳು ತಪಸ್ಸು ಮಾಡಿ ಮಳೆ ತರುಸುತ್ತಾರೆಂಬುಂದೊಂದು ನಂಬಿಕೆ. ಜನಪದರು ನಂಬಿಕೊಂಡಿರುವ ಸಂಪ್ರದಾಯಗಳು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವ್ಯತ್ಯಾಸವಾಗುವವು. ಕೆಲವೊಂದು ನಂಬಿಕೆಗಳು ಸಾಮ್ಯವಾಗಿರುತ್ತವೆ. ಹೀಗೆ ಈ ಮೇಲಿನ ನಂಬಿಕೆಗಳಲ್ಲಿ ಸಾಮಾನ್ಯವಾಗಿ ಹೈದರಾಬಾದ್ ಕರ್ನಾಟಕದ ವ್ಯಾಪ್ತಿ ಪ್ರದೇಶದಲ್ಲಿ ಜನಪದರು ನಂಬಿಕೊಂಡಂತ ಆಚರಣೆಗಳಾಗಿವೆ. ಈ ಮೇಲಿನ ಎಲ್ಲ ನಂಬಿಕೆಗಳನ್ನು ಜನಪದರು ಮಳೆಯನ್ನು ಕುರಿತು ನಂಬಿಕೆಬಂಡು ಬಂದಂತಹ ಆಚರಣೆಗಳಾಗಿವೆ. ಆದರೆ ಇವು ಎಷ್ಟರಮಟ್ಟಿಗೆ ಸತ್ಯವಾಗಿವೆ ಎಂಬುದನ್ನು ವೈಜ್ಞಾನಿಕ ಹಿನ್ನೆಲೆಯಲ್ಲಿ ಪರಿಶೀಲಿಸಿದಾಗ ಇವುಗಳಲ್ಲಿ ಉರುಳು ಕಂಡುಬರುವುದಿಲ್ಲ.